**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 36/2019**

| | | |
|---|---|---|
| ಸಾಕ್ಷಿಯ ಹೆಸರುಃ | ಭೀಮರಾಯ | ಫ್ರಾಸಾಃ 1 |
| ತಂದೆ/ಗಂಡನ ಹೆಸರುಃ | ದೊಡ್ಡಪ್ಪ | ಚಾಸಾಃ 1 |
| ವಯಸ್ಸು ಃ | 34 ವರ್ಷ | ದಿಃ 28-07-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಗುಡ್ಲಗುಂಟ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನನಗೆ ಚಾಸಾಃ 4 ರವರ ಪರಿಚಯವಿದೆ. ನನಗೆ ಆರೋಪಿತನ ಪರಿಚಯವಿದೆ. ದಿನಾಂಕಃ 25-09-2018 ರಂದು ಮದ್ಯಾಹ್ನ 3-00 ಗಂಟೆ ಸುಮಾರಿಗೆ ಆರೋಪಿತನು ಎತ್ತುಗಳನ್ನು ಹೊಲದಲ್ಲಿ ಬಿಟ್ಟು ಬೆಳೆ ಹಾಳು ಮಾಡುತ್ತಿದ್ದಾಗ ನಾನು ಎತ್ತುಗಳನ್ನು ತೆಗೆದುಕೊಂಡು ಹೋಗು ಎಂದು ಆರೋಪಿತನಿಗೆ ಅಂದಾಗ, ಆರೋಪಿತನು ನನಗೆ ಸೊಕ್ಕು ಬಹಳ ಆಗಿದೆ, ಸುಮ್ಮನೆ ಬಿಡುವುದಿಲ್ಲ ಎಂದು, ಕುಂಟಿಯ ಮೇಳಿ ಕಟ್ಟಿಗೆಯಿಂದ ತಲೆಗೆ ಹೊಡೆದು ಗಾಯ ಮಾಡಿರುತ್ತಾನೆ. ಕೈಯಿಂದ ಬೆನ್ನಿಗೆ ಗುದ್ದಿರುತ್ತಾನೆ ಮತ್ತು ತುಟಿಗೆ ಗುದ್ದಿ ಗಾಯಮಾಡಿರುತ್ತಾನೆ. ಆಗ ಚಾಸಾಃ 4 ರವರು ಬಂದು ಬಜಗಳವನ್ನು ಬಿಡಿಸಿ ಮನೆಗೆ ಕರೆದುಕೊಂಡು ಬಂದಿರುತ್ತಾನೆ. ಆಗ ನಾನು ಸೈದಾಪೂರ ಪೊಲಿಸ ಠಾದಣೆಗೆ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಕುಂಟಿಯ ಮೇಳಿ ಕಟ್ಟಿಗೆಯನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಮು. ಮಾ. 1 ಎಂದು ಗುರುತಿಸಲಾಯಿತು. ನಂತರ ಸರಕಾರಿ ದವಾಖಾನೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 26-09-2018 ರಂದು ಮದ್ಯಾಹ್ನ 12-30 ರಿಂದ 1-00 ಗಂಟೆಯವರೆಗೆ ಪೋಲಿಸರು ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊಗಳನ್ನು ತೋರಿಸಲಾಗಿ ಸಾಕ್ಷಿಯು ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತನ ಪರ ವಕೀಲರು ಶ್ರೀ ಎಚ್. ಎಮ್.ಪಿ. ಇವರಿಂದ

1. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು, ಬರೆಯಲು ಸ್ವಲ್ಪ-ಸ್ವಲ್ಪ ಬರುತ್ತದೆ. ಚಾಸಾಃ 2 ರವರು ನನ್ನ ಅಕ್ಕನ ಮಗನಾಗಬೇಕು. ಚಾಸಾಃ 3 ರವರು ನಮ್ಮ ಕುಲದವರು ಎಂದರೆ ಸರಿ. ಚಾಸಾಃ 4 ರವರು ನನ್ನ ಖಾಸಾ ಸಹೋದರನಾಗಬೇಕು. ದಿನಾಂಕಃ 25-09-2018 ರಂದು ಆರೋಪಿತನು ಎತ್ತುಗಳನ್ನು ಮೇಯಿಸುತ್ತಿರುವಾಗ ನಾನು ಜಮೀನಿನಲ್ಲಿ ಗಳೆ ಹೊಡೆಯುತ್ತಿದ್ದೆನು. ಸದರಿ ಕಟ್ಟಿಗೆಯು ಗಳೆ ಹೊಡೆಯುವಾಗ ಉಪಯೋಗಿಸುತ್ತಾರೆ ಎಂದರೆ ಸರಿ. ಆರೋಪಿತನ ಹೊಲ ಘಟನಾ ಸ್ಥಳದಿಂದ ದೂರ ಇದೆ ಎಂದರೆ ಸರಿಯಲ್ಲ.

2. ಚಾಸಾಃ 2 ರವರ ಹೊಲದ ಹತ್ತಿರ ಆರೋಪಿತನ ಹೊಲ ಇದೆ ಎಂದರೆ ಸರಿಯಲ್ಲ. ಸದರಿ ಘಟನಾ ಸ್ಥಳದಿಂದ ಆರೋಪಿತನ ಹೊಲ ದಾಟಿದ ನಂತರ ಚಾಸಾಃ 2 ರವರ ಹೊಲ ಇದೆ ಎಂದರೆ ಸರಿಯಲ್ಲ. ಸದರಿ ಸೆಪ್ಟೆಂಬರ ತಿಂಗಳಿನಲ್ಲಿ ಜಮೀನಿನಲ್ಲಿ ಬೆಳೆ ಇರುವುದರಿಂದ ರೈತರು ಹೊಲದಲ್ಲಿ ಇರುತ್ತಾರೆ ಎಂದರೆ ಸರಿ. ಘಟನಾ ಸ್ಥಳದ ಹತ್ತಿರ ಬೇರೆ ಹೊಲದಲ್ಲಿ ರೈತರು ಇದ್ದರು ಎಂದರೆ ಸರಿಯಲ್ಲ.

3. ಘಟನೆಯಾದ ನಂತರ ಪೋಲಿಸ ಠಾಣೆಗೆ ನಾನು ಮತ್ತು ಚಾಸಾಃ 4, 6 ರವರು ಪೋಲಿಸ ಠಾಣೆಗೆ ದೂರು ನೀಡಲು ಸಂಜೆಃ 6-30 ಗಂಟೆಗೆ ಹೋಗಿರುತ್ತೇವೆ. ದೂರನ್ನು ನೀಡಲು ಹೋದಾಗ ಪೋಲಿಸ ಠಾಣೆಯಲ್ಲಿ ಅರ್ಧ ಗಂಟೆಯವರೆಗೆ ಇದ್ದೇವು. ಸದರಿ ಚಾಸಾಃ 4 ಮತ್ತು ಚಾಸಾಃ 6 ರವರ ವಿಚಾರಣೆಯನ್ನು ಅದೇ ದಿನ ಮಾಡಿರುತ್ತಾರೆ. ಸದರಿ ಆರೋಪಿತನು ಮು. ಮಾ. 1 ರಿಂದ ತಲೆಗೆ ಮತ್ತು ಕೈಯಿಂದ ತುಟಿಗೆ ಹೊಡೆದಾಗ ರಕ್ತಗಾಯವಾಗಿರುತ್ತದೆ ಎಂದರೆ ಸರಿ. ಸದರಿ ರಕ್ತದ ಕಲೆ ನನ್ನ ಅಂಗಿಯ ಮೇಲೆ ಬಿದ್ದಿರುವುದಿಲ್ಲ. ಸದರಿ ರಕ್ತ ಕಲೆ ಆಗಿದ್ದರ ಬಗ್ಗೆ ಪೋಲಿಸರು ಕೇಳಿರುವುದಿಲ್ಲ ಮತ್ತು ನಾನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನನಗೆ ತಲೆಗೆ ಗಾಯವಾದಾಗ ತಲೆಗೆ (ಬ್ಯಾಂಡೇಜ್) ಗಾಯದ ಪಟ್ಟಿ ಎರಡು ದಿನಗಳವರೆಗೆ ಇತ್ತು. ಪೋಲಿಸ ಠಾಣೆಯಿಂದ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಚಾಸಾಃ 5 ರವರು ಗಾಯದ ಬಗ್ಗೆ ವಿಚಾರಣೆ ಮಾಡಿರುತ್ತಾರೆ.

4. ಸದರಿ ಚಾಸಾಃ 5 ರವರು ರಕ್ತ ಬಿದ್ದಿದ ಬಟ್ಟೆಯ ಬಗ್ಗೆ ನೋಡಿರುತ್ತಾರೆ ಆದರೆ ಬಟ್ಟೆಯ ಬಗ್ಗೆ ಕೇಳಿರುವುದಿಲ್ಲ. ಪಂಚನಾಮೆಯಲ್ಲಿ ಪೋಲಿಸರು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ದಿನಾಂಕಃ 25-09-2018 ರಂದು ಆರೋಪಿತನು ನನ್ನ ಹೊಲದಲ್ಲಿ ಎತ್ತುಗಳನ್ನು ಮೆಯಿಸುತ್ತಿದ್ದಾಗ ಅದನ್ನು ನಾನು ಕೇಳಿದಾಗ ಆರೋಪಿತನು ನನಗೆ ಮು. ಮಾ. 1 ರಿಂದ ತಲೆಗೆ ಹೊಡೆದಿರುತ್ತಾನೆ.

ಕೈಯಿಂದ ಬೆನ್ನಿಗೆ ಮತ್ತು ತುಟಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಪೋಲಿಸ ಠಾಣೆಗೆ ಹೋಗಿ ನಿಪಿ-1 ರಂತೆ ದೂರನ್ನು ನೀಡಿ, ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 26-09-2018 ರಂದು ಪೊಲಿಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮು. ಮಾ. 1 ರಿಂದ ಆರೋಪಿತನು ಹೊಡೆದಿರುತ್ತಾನೆ ಎಂದರೆ ಸರಿ. ಮು. ಮಾ. 1 ನನಗೆ ಸೇರಿದ್ದು ಎಂದರೆ ಸರಿಯಲ್ಲ.

5. ನಾನು ಮತ್ತು ಚಾಸಾಃ 4 ರವರು ಹೊಲದಿಂದ ನೀರು ಕಾವಲಿಯ ಮೂಲಕ ಆರೋಪಿತನ ಹೊಲಕ್ಕೆ ಹೋಗಿದ್ದರಿಂದ ಆರೋಪಿತನು ತಕರಾರು ಮಾಡಿದ್ದಕ್ಕೆ ನಾವು ಆರೋಪಿತನ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕಾವಲಿಯ ಮೂಲಕ ಮಳೆ ನೀರು ಹೋಗುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಚಾಸಾಃ 2, 4, 6 ರವರು ಒಟ್ಟಿಗೆ ಸೇರಿ ಸುಳ್ಳು ಪ್ರಕರಣವನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**